PCR 12/2017

C.W 1

# ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಪಿ.ಸಿ.ಆರ್. ಸಂಖ್ಯೆ: 12/2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಿ. ರೇವಣಗೌಡ | ಸಿ.ಡಬ್ಲೂ | 1 |
| ತಂದೆಯ ಹೆಸರು | ದ್ಯಾಮನಗೌಡ | | |
| ವಯಸ್ಸು | 54 | ಪ್ರಮಾಣ ವಚನ ನೀಡಲಾದ | |
| ಉದ್ಯೋಗ | ವಕೀಲರು | ದಿನಾಂಕ: 27-12-2019 | |
| ವಾಸ ಸ್ಥಳ | ಹರಪನಹಳ್ಳಿ | | |

## ಸ್ವಯಂ ಪ್ರಮಾಣ ಪೂರ್ವಕ ಹೇಳಿಕೆ

ನಾನು ಅಸಲು ದಾವಾ ಸಂಖ್ಯೆ 154/2004 ರಲ್ಲಿ ಪ್ರತಿವಾದಿ 1, 3 ಮತ್ತು 4 ರವರ ಪರವಾಗಿ ಅಧಿಕಾರ ಪತ್ರ ಪಡೆದು ಪ್ರಕರಣವನ್ನು ನಡೆಸಿರುತ್ತೇನೆ. ಸದರಿ ದಾವೆಗೆ ಸಂಬಂಧಿಸಿ ಮೊದಲು ವಾದಿ ನೀಲಮ್ಮಳು 1 ನೇ ಪ್ರತಿವಾದಿಯು ವಿರುದ್ದ ಮಾತ್ರ ಪಾಲು ವಿಭಾಗ ಕೋರಿ ದಾವೆ ಯನ್ನು ಸಲ್ಲಿಸಿ ಏಕಪಕ್ಷಿಯ ಡಿಕ್ರಿಯನ್ನು ಪಡೆದಿರುತ್ತಾಳೆ. ನಂತರ ತಡವಾಗಿ 1 ನೇ ಪ್ರತಿವಾದಿಯು ನನ್ನಿಂದ ಮೇಲ್ಮನವಿ ಅಪೀಲು ಅರ್ಜಿಯನ್ನು ಸಲ್ಲಿಸಿ ಅಸಲು ದಾವಾದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಯ ರಕ್ತ ಸಂಬಂಧಿಗಳು ಇನ್ನಿಬ್ಬರು ಗೌರಮ್ಮ ಮತ್ತು ಸಿದ್ದಲಿಂಗಮ್ಮ ಇವರನ್ನು ಕೈ ಬಿಟ್ಟು ಅವರ ಭಾಗವನ್ನು ತಮಗೆ ಸೇರಿಸಿಕೊಂಡು ಏಕಪಕ್ಷಿಯ ಡಿಕ್ರಿಯನ್ನು ಪಡೆದು ಅದರ ಆಧಾರದ ಮೇಲೆ ಅಂತಿಮ ಡಿಕ್ರಿ ಆದೇಶವಿಲ್ಲದೇ ವಾದಿ ನೀಲಮ್ಮಳು ಮಾಚಿಹಳ್ಳಿ ಸರ್ವೆ ನಂಬರ್ 160/ಬಿ ರಲ್ಲಿ 7 ಎಕರೆ 0. 72 ಸೆಂಟ್ಸ್ ವಿಸ್ತೀರ್ಣ ವನ್ನು ತನ್ನ ಹೆಸರಿಗೆ ಪಹಣಿ ಖಾತಾ ಮಾಡಿಸಿಕೊಂಡು ಅದರ ಆಧಾರ ಮೇಲೆ ಅಳವಂಡಿ ವೀರಣ್ಣ ಎಂಬುವವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಅವರ ಹೆಸರಿನ ಸಹ ಪಹಣಿ ಖಾತಾ ವರ್ಗಾವಣೆ ಮಾಡಿಸಿರುತ್ತಾಳೆ. ಸದರಿ ವಿಚಾರವನ್ನು ಮಾನ್ಯ ಹಿರಿಯ ಶ್ರೇಣಿ ಮೇಲ್ಮನವಿಯಲ್ಲಿ ನ್ಯಾಯಾಲಯಕ್ಕೆ ಅವಶ್ಯಕ ಪಕ್ಷಗಾರರನ್ನು ಕೈ ಬಿಟ್ಟು ಅವರು ಭಾಗದ ವಿಸ್ತೀರ್ಣವನ್ನು ದುರುಪಯೋಪಡಿಸಿಕೊಂಡರು ಈ ರೀತಿ ಏಕಪಕ್ಷಿಯ ಡಿಕ್ರಿಯನ್ನುಪಡೆದಿರುತ್ತಾರೆ ಎಂದು ಮನವರಿಕೆ ಮಾಡಿದ ನಂತರ ಸದರಿ ಅಪೀಲು ಕೆಳ ನ್ಯಾಯಾಲಯದ ಏಕಪಕ್ಷಿಯ ಡಿಕ್ರಿಯನ್ನು ತೆಗೆದು ಹಾಕಿ ರಿಮ್ಯಾಂಡ್ ಮಾಡಿ ಅವಶ್ಯಕ ಪಕ್ಷಗಾರರನ್ನು ಸೇರ್ಪಡಿಸಿ ಪೂರ್ಣ ವಿಚಾರಣೆ ಒಳಪಡಿಸಿ ತೀರ್ಪು ನೀಡಬೇಕು ಎಂದು ಕೆಳ ನ್ಯಾಯಾಲಯಕ್ಕೆ ನಿರ್ದೇಶನ ನೀಡಿ ಅಪೀಲು ಅರ್ಜಿಯನ್ನು ಪುರಸ್ಕರಿಸಿರುತ್ತದೆ.

2. ಅದರ ಆಧಾರ ಮೇಲೆ ಸದರಿ ಘನ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 154/2004 ನ್ನು ಪೂರ್ಣ ವಿಚಾರಣೆಗೆ ಒಳಪಡಿಸಿದಾಗ ಏಕಪಕ್ಷಿಯ ಪ್ರಾಥಮಿಕ ಡಿಕ್ರಿಯ ಆದೇಶದ ಪ್ರಕಾರ ಪ್ರಸ್ತುತ ಪ್ರಕರಣದ

ಆರೋಪಿ 5 ರಿಂದ 7 ರವರುಗಳು ಸರ್ಕಾರಿ ಅಧಿಕಾರಿಗಳಾಗಿದ್ದು ಅವರುಗಳು ಮ್ಯುಟೇಶನ್ ಆದೇಶವನ್ನು ಪ್ರಾಥಮಿಕ ಡಿಕ್ರಿಯ ಆದೇಶದ ಪ್ರಕಾರ ಮಾಡಿರುವುದನ್ನು ಒಪ್ಪಿಕೊಂಡಿದ್ದು ಅದಕ್ಕೆ ಅನ್ವಯಿಸಿ ಭೂ ಕಂದಾಯ ಅಧಿನಿಯಮದಲ್ಲಿ ಪ್ರಾಥಮಿಕ ಡಿಕ್ರಿಯ ಆದೇಶದ ಪ್ರಕಾರ ಖಾತಾ ವರ್ಗಾವಣೆ ಮಾಡಲು ಯಾವುದೇ ನಿಯಮಗಳು ಇಲ್ಲ ಎಂದು ಪಾಟೀಸವಾಲು ಮಾಡಿರುವುದರಲ್ಲಿ ಈ ಅಂಶವನ್ನು ಒಪ್ಪಿಕೊಂಡಿರುತ್ತಾರೆ ಅದರ ಜೊತೆಗೆ ನ್ಯಾಯಾಲಯದ ಆದೇಶ ಪ್ರಕಾರ ಮ್ಯುಟೇಶನ್ ಮಾಡಿರುತ್ತೇವೆ ಎಂದು ಕಾನೂನಿನ ತಿಳುವಳಿಕೆ ಇದ್ದರೂ ಸಹ ತಮ್ಮ ರಕ್ಷಣೆಗೋಸ್ಕರ ಸುಳ್ಳು ಸಾಕ್ಷ್ಯ ಹೇಳಿಕೆಗಳನ್ನು ನೀಡಿರುತ್ತಾರೆ. ಈ ರೀತಿ ಸರ್ಕಾರಿ ಅಧಿಕಾರಿಗಳು ತಮ್ಮ ಅಧಿಕಾರ ದುರ್ಬಳಕೆ, ಕರ್ತವ್ಯ ನಿರ್ಲಕ್ಷ್ಯ ಮಾಡಿ ವಾದಿ ನೀಲಮ್ಮಳಿಗೆ ಅನೂಕುಲ ಮಾಡಿಕೊಟ್ಟಿದ್ದು 3 ಮತ್ತು 4 ನೇ ಪ್ರತಿವಾದಿಗಳಿಗೆ ಅವರ ಭಾಗದ ಆಸ್ತಿಯನ್ನು ದುರ್ಬಳಕೆ ಮಾಡಿ ಪರಭಾರೆ ಮಾಡಿರುವ ಕಾರಣ ಅವರಿಗೆ ತುಂಬಲಾರದ ನಷ್ಟ ಉಂಟಾಗಿರುತ್ತದೆ. ಅಲ್ಲದೇ 2 ನೇ ಪ್ರತಿವಾದಿಯು ಅಳವಂಡಿ ವೀರಣ್ಣ ಇವರು ವಾದಿ ನೀಲಮ್ಮಳ ಕಾನೂನು ಪ್ರಕಾರ ಬರಬೇಕಾದ ವಿಸ್ತೀರ್ಣ ಕ್ಕಿಂತೂ ಹೆಚ್ಚಿನ ವಿಸ್ತೀರ್ಣ ಕೆ ಅನ್ವಯಿಸಿ ನೋಂದಣಿ ದಾಖಲೆ ಮತ್ತು ಕಂದಾಯ ದಾಖಲೆಗಳನ್ನು ಸೃಷ್ಟಿಸಿಕೊಂಡು 3 ಮತ್ತು 4 ನೇ ಪ್ರತಿವಾದಿಗಳು ಭಾಗದ ವಿಸ್ತೀರ್ಣ ದಲ್ಲಿ ದೌರ್ಜನ್ಯದಿಂದ ಪ್ರವೇಶ ಮಾಡಿರುತ್ತಾರೆ.

3. ಈ ಎಲ್ಲಾ ಕಾರಣಗಳಿಂದಾಗಿ ಅಸಲು ದಾವಾ ಸಂಖ್ಯೆ 154/2004 ರ ದಾವೆಯಲ್ಲಿ ಕಾನೂನು ನಿಯಮಾವಳಿಗಳನ್ನು ಪಾಲಿಸಬೇಕಾದ ಅಧಿಕಾರಿಗಳಾದ ಆನಂದಪ್ಪ ನಾಯ್ಕ, ವಿ. ಎಂ. ಜಂಗಾಡಿ ಮತ್ತು ಮಿಯಾಜನ್ ಈ ಮೂರು ಅಧಿಕಾರಿಗಳ ಅಧಿಕಾರ ದುರ್ಬಳಕೆಯ ಕರ್ತವ್ಯ ಲೋಪದಿಂದಾಗಿ ಈ ಪ್ರಕರಣದ ಆರೋಪಿಗಳಾಗದ ನೀಲಮ್ಮ, ಬಸಪ್ಪ, ಆನಂದ ಮತ್ತು ಅಳವಂಡಿ ವೀರಣ್ಣ ಇವರುಗಳು ನನ್ನ ಕಕ್ಷಿದಾರರಾದ ಗೌರಮ್ಮ ಮತ್ತು ಸಿದ್ದಲಿಂಗಮ್ಮ ರವರುಗಳಿಗೆ ಅನ್ಯಾಯಾ ಮಾಡುವ ದುರುದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ಅಲ್ಲದೇ ನ್ಯಾಯಾಲಯದಲ್ಲಿಯೂ ಸುಳ್ಳು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಮೊಕದ್ದಮೆಯನ್ನು ಸಲ್ಲಿಸುವುದಕ್ಕಿಂತಲೂ ಮೊದಲು 5 ರಿಂದ 7 ಆರೋಪಿಗಳ ವಿರುದ್ದ ದೂರ ದಾಖಲಿಸಲು ಸರ್ಕಾರಿ ಅಧಿಕಾರಿ ಪ್ರಾಧಿಕಾರಕ್ಕೆ ಅನುಮತಿ ಕೋರಿ ದೂರ ಅರ್ಜಿಯನ್ನು ಕಳುಹಿಸಿರುತ್ತೇನೆ. ಅದಕ್ಕೆ ಯಾವುದೇ ಪ್ರಾಧಿಕಾರ ದಿಂದ ಪ್ರತ್ಯುತ್ತರ ಬಂದಿರುವುದಿಲ್ಲ. ಆದ್ದರಿಂದ ನನ್ನ ಅನುಮತಿ ಅರ್ಜಿಯಲ್ಲಿ ತಿಳಿಸಿದ 15 ದಿನಗಳ ಕಾಲಾವಕಾಶದ ನಂತರ ಯಾವುದೇ ಮಾಹಿತಿ ಬಾರದಿದ್ದ ಕಾರಣ ಅವ್ಯಕ್ತ ಅನುಮತಿ ದೊರೆತಿದೆ ಎಂದು ನನ್ನ ದೂರು ಅರ್ಜಿಯಲ್ಲಿ ತಿಳಿಸಿ ಈ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ.

4. ಈ ದೂರಿನಲ್ಲಿ ನಾನು ಪಿರ್ಯಾದುದಾರನು ಆಗಲು ಕಾರಣ ಸರ್ಕಾರಿ ಅಧಿಕಾರಿಗಳಾದ 5 ರಿಂದ 7 ನೇ ಆರೋಪಿಗಳು ಸಾಕ್ಷಿದಾರರುಗಳಾಗಿ ಸಾಕ್ಷ್ಯ ಹೇಳಿಕೆಗಳನ್ನು ಇದೇ ಘನ ನ್ಯಾಯಾಲಯದಲ್ಲಿ ನೀಡುವ ಸರ್ಬಂಧ ದಲ್ಲಿ ನಾನೇ ಅವರಿಗೆ ಪಾಟೀಸವಾಲು ಮಾಡಿದ ಸಾಂದರ್ಭಿಕ ಕಾರಣಗಳನ್ನು ವಿವರವಾಗಿ ಕೇಳಿದ್ದರೂ ಸಹ ಕಾನೂನಿನ ನಿಯಮಾಳಿಗಳಿಗೆ ವಿರುದ್ದವಾಗಿ ತಮ್ಮ ಅಧಿಕಾರ ಚಲಾಯಿಸಿರುವುದು ಅವರ ಪಾಟೀಸವಾಲಿನಲ್ಲಿ ಹೇಳಿಕೆಗಳಿಂದ ಕಂಡು ಬಂದ ಕಾರಣ ನನ್ನ ಕಕ್ಷಿದಾರರ ಪರವಾಗಿ ನ್ಯಾಯಾಲಯದಲ್ಲಿಯೇ ನನ್ನ ಗಮನಕ್ಕೆ ಈ ಪ್ರಕರಣದ ಆರೋಪಿಗಳು ಅಪರಾಧ ಎಸಗಿರುತ್ತಾರೆ ಎಂದು ಮನವರಿಕೆಯಾದ ಕಾರಣ ಸದರಿ

ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಆದುದರಿಂದ ನನ್ನ ಕಕ್ಷಿದಾರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡುವ ಸಲುವಾಗಿ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಂಡು ಶಿಕ್ಷೆಗೆ ಒಳಪಡಿಸಬೇಕು ಎಂದು ಹೇಳಿಕೊಳ್ಳುತ್ತೇನೆ. ನನ್ನ ಈ ದೂರಿನೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ.

5. ದಿಃ 16-08-2014 ರಂದು ಸೂಕ್ತ ಪ್ರಾಧಿಕಾರಕ್ಕೆ ನೀಡಿದ್ದ ಅನುಮತಿ ನೀಡುವ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಅಸಲು ದಾವಾ ಸಂಖ್ಯೆ 154/2004 ರಲ್ಲಿ ಮಿಯಾಜಾನ್, ಎಂ. ಆರ್ ನಾಗರಾಜ, ಬಿ. ಎಂ ಜಿಂಗಾಡೆ ಮತ್ತು ಕೆ. ಬಿ. ಆನಂದಪ್ಪನಾಯ್ಕ ರವರುಗಳು ನೀಡಿರುವ ಸಾಕ್ಷ್ಯ ಹೇಳಿಕೆಗಳ ದೃಡೀಕೃತ ನಕಲು ಗಳನ್ನು ಹಾಜರುಪಡಿಸಿದ್ದು ಅವುಳನ್ನು ಕ್ರಮವಾಗಿ ನಿಪಿ 2 ರಿಂದ 5 ಎಂದು, ಅಸಲು ದಾವಾ ಸಂಖ್ಯೆ 154/2004 ರ ಡಿಕ್ರಿಯ ದೃಡೀಕೃತ ನಕಲನ್ನು ನಿಪಿ 5 ಎಂದು, ಸದರಿ ದಾವೆಯಲ್ಲಿ ವಾದ ಪತ್ರದ ದೃಡೀಕೃತ ನಕಲನ್ನು ನಿಪಿ 6 ಎಂದು, ಆರ್ ಎ ನಂಬರ್ 67/2009 ತೀರ್ಪು ಮತ್ತು ಡಿಕ್ರಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ಮತ್ತು 8 ಎಂದು, ಮೂರು ಮ್ಯುಟೇಶನ ಪ್ರತಿಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 9 ಮತ್ತು 11 ಎಂದು, ದಿಃ 06-06-2007 ರ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ 12 ಎಂದು, ಒಂದು ಮ್ಯುಟೇಶನ ಪ್ರತಿಯ ದೃಡೀಕೃತ ನಕಲನ್ನು ನಿಪಿ 13 ಎಂದು, ಅಸಲು ದಾವಾ ಸಂಖ್ಯೆ 154/2004 ರಲ್ಲಿ 2 ನೇ ಪ್ರತಿವಾದಿ ಹಾಗೂ 5 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿ ಸಲ್ಲಿಸಿದ್ದ ಲಿಖಿತ ಪ್ರತಿವಾದ ಪತ್ರದ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 14 ಮತ್ತು 16 ಎಂದು, ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯು ಸಲ್ಲಿಸಿದ ಕೌಂಟರ್ ಕ್ಲೇಮ್ ದೃಡೀಕೃತ ನಕಲನ್ನು ನಿಪಿ 17 ಎಂದು, ದಿಃ 21-03-2014 ರಂದು ಹರಪನಹಳ್ಳಿ ತಹಶೀಲ್ದಾರರು ನೀಡಿರುವ ದೃಡೀಕರಣ ಪತ್ರದ ದೃಡೀಕೃತ ನಕಲನ್ನು ನಿಪಿ 18 ಎಂದು, ಒಂದು ಮ್ಯುಟೇಶನ ಪ್ರತಿಯ ದೃಡೀಕೃತ ನಕಲನ್ನು ನಿಪಿ 19 ಎಂದು, ಹತ್ತು ಕೋರಿಯರ್ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 20 ರಿಂದ ನಿಪಿ 29 ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**